ಓ ಎಸ್ ನಂ. 72/2022

ಪಿ ಡಬ್ಲ್ಯು 1

ದಿನಾಂಕ 14-10-2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 2ನೇ ಪ್ರತಿವಾದಿ ಪರಃ ಶ್ರೀ ಬಿ ಎಂ ಒ ವಕೀಲರಿಂದಃ

ನಮ್ಮ ಕುಟುಂಬದ ಮೂಲ ಪುರುಷ್ಪ ಯಾರು ಎಂದರೆ ಸಾಕ್ಷಿ ಕೊಪ್ಪಲು ರಂಗಪ್ಪ ಎಂದು ನುಡಿದಿರುತ್ತಾರೆ. ಸದರಿಯವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ನಾಲ್ಕು ಜನ ಗಂಡು ಮಕ್ಕಳು ಎಂದು ನುಡಿಯುತ್ತಾರೆ. ಹೆಣ್ಣು ಮಕ್ಕಳು ಎಷ್ಟು ಜನ ಎಂದು ಕೇಳಲಾಗಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಕೊಪ್ಪಲು ರಂಗಪ್ಪರವರು ಹೆಂಡತಿಯ ಹೆಸರು ನನಗೆ ಗೊತ್ತಿಲ್ಲ. ಕೊಪ್ಪಲು ರಂಗಪ್ಪರವರ ನಾಲ್ಕು ಜನ ಗಂಡು ಮಕ್ಕಳ ಹೆಸರು ಹನುಮಂತಪ್ಪ, ಗೋವಿಂದಪ್ಪ, ತಿಮ್ಮಪ್ಪ ಮತ್ತು ಕರಿಯಪ್ಪ ಆಗಿರುತ್ತದೆ. ಹನುಮಂತಪ್ಪನವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ಗೊತ್ತಿಲ್ಲ. ಗೋವಿಂದಪ್ಪರವರಿಗೆ ಎಷ್ಟು ಜನ ಮಕ್ಕಳು ಎಂದರೆ ಸಾಕ್ಷಿ ತಿಮ್ಮರಾಯಪ್ಪ ಎಂಬ ಒಬ್ಬನೇ ಮಗ ಎಂದು ನುಡಿದಿರುತ್ತಾರೆ. ಸದರಿ ಗೋವಿಂದಪ್ಪರವರಿಗೆ ಹೆಣ್ಣು ಮಕ್ಕಳು ಇಲ್ಲವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ತಿಮ್ಮಪ್ಪರವರಿಗೆ ಒಬ್ಬರು ಗಂಡು ಮತ್ತು ಒಬ್ಬರು ಹೆಣ್ಣು ಮಗಳು ಇದ್ದಾರೆ, ಅವರುಗಳ ಪೈಕಿ ಗಂಡು ಮಗನ ಹೆಸರು ರಾಜಪ್ಪ ಮತ್ತು ಹೆಣ್ಣು ಮಗಳ ಹೆಸರು ನನಗೆ ಗೊತ್ತಿಲ್ಲ ನುಡಿದಿರುತ್ತಾರೆ.

ಕರಿಯಪ್ಪರವರಿಗೆ ಎರಡು ಗಂಡು ಮತ್ತು ಒಬ್ಬಳು ಮಗಳು ಇದ್ದಾರೆ. ಅವರೆಂದರೆ ನನ್ನ ತಂದೆಯಾದ ಪರಮೇಶ್ವರಪ್ಪ, ನನ್ನ ಚಿಕ್ಕಪ್ಪ ಬೊಮ್ಮೇಗೌಡ ಮತ್ತು ನನ್ನ ಅತ್ತೆ ಲಕ್ಷ್ಮೀದೇವಿ ಎಂದು ನುಡಿಯುತ್ತಾರೆ. ನನ್ನ ತಾಯಿಯ ಹಸೆರು ಮಂಜಮ್ಮ. ಸುವರ್ಣರವರು ನನಗೆ ಅಜ್ಜಿಯಾಗಬೇಕು.

2. ಪ್ರಸ್ತುತ ದಾವೆಯನ್ನು ಯಾವ ಉದ್ದೇಶಕ್ಕೆ ಹೂಡಿರುತ್ತೇನೆ ಎಂದರೆ ಸಾಕ್ಷಿ ನನ್ನ ಅಜ್ಜನಾದ ಕರಿಯಪ್ಪರವರಿಗೆ ಯಾವುದೇ ಆಸ್ತಿ ಕೊಟ್ಟಿಲ್ಲ ಆಗಾಗಿ ದಾವೆ ಹೂಡಿದ್ದೇನೆ ಎಂದು ನುಡಿದಿರುತ್ತಾರೆ. ನಮ್ಮ ಕುಟುಂಬದಲ್ಲಿ ಯಾವಾಗ ವಿಭಾಗವಾಯಿತೆಂದು ತಿಳಿದಿದೆಯಾ ಎಂದರೆ ಸಾಕ್ಷಿ ವಿಭಾಗವಾಗದೆ ಇರುವುದರಿಂದಲೇ ನಾನು ದಾವೆ ಹೂಡಿದ್ದೇನೆ ಎಂದು ನುಡಿದಿರುತ್ತಾರೆ. 1960 ನೇ ಇಸವಿಯಲ್ಲಿ ಕೊಪ್ಪಲು ರಂಗಪ್ಪನವರ ನಾಲ್ಕು ಜನ ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವಿಭಾಗದಂತೆ ಕೊಪ್ಪಲು ರಂಗಪ್ಪರವರ ಮಕ್ಕಳು ಬೇರೆ ಬೇರೆ ವಾಸಿಸಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿ ಯಾವುದೇ ವಿಭಾಗವಾಗಿಲ್ಲ ಎಂದು ನುಡಿದಿರುತ್ತಾರೆ. ವಿಭಾಗ ಕೋರಿ ದಾವೆ ಹೂಡಲು ನನ್ನ ತಂದೆಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ನನ್ನ ತಂದೆಗೆ ಇಬ್ಬರು ಹೆಂಡತಿಯರಿದ್ದು, ಅವರು ತನ್ನ ಎರಡನೇ ಹೆಂಡತಿ ಜಯಮ್ಮರವರೊಂದಿಗೆ ನೆಲೆಸಿದ್ದು, ನಾವು ಊರಿನ ಒಂದು ರೆವಿನ್ಯೂ ಲ್ಯಾಂಡಿನಲ್ಲಿ ನೆಲೆಸಿರುತ್ತೇವೆ, ಆ ಕಾರಣದಿಂದ ನನ್ನ ತಂದೆ ದಾವೆ ಹೂಡಿಲ್ಲ ಎಂದು ನುಡಿದುರತ್ತಾರೆ. ಎಂದರೆ ಸರಿಯಲ್ಲ. ನನ್ನ ತಂದೆಯ ಎರಡನೆ ಹೆಂಡತಿಯಾದ ಜಯಮ್ಮರವರಿಗೆ ನಂದೀಶ ಎಂಬ

ಮಗನಿದ್ದಾನೆ. ಸದರಿ ಜಯಮ್ಮರವರು ಮರಣ ಹೊಂದಿರುತ್ತಾರೆ. ನನ್ನ ತಾಯಿ ಮಂಜಮ್ಮ ಬದುಕಿದ್ದಾರೆ. ಕೊಪ್ಪಲು ರಂಗಪ್ಪನವರು ಮಕ್ಕಳು ಎಷ್ಟು ವರ್ಷಗಳಿಂದ ಬೇರೆ ಬೇರೆ ವಾಸಿಸುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯ ಬಗ್ಗೆ ನನಗೆ ಯಾವುದೇ ಸೂಕ್ತ ಮಾಹಿತಿ ಇಲ್ಲದೆ ಇದ್ದರೂ ಸಹ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಕೊಪ್ಪಲು ರಂಗಪ್ಪರವರ ಕುಟುಂಬದಲ್ಲಿ ಈಗಾಗಲೇ ವಿಭಾಗವಾಗಿರುತ್ತದೆ ಎಂದರೆ ಸರಿಯಲ್ಲ.

3. ದಿನಾಂಕ 25/07/1984 ರಂದು ಕೊಪ್ಪಲು ರಂಗಪ್ಪರವರು ಅವರ ನಾಲ್ಕು ಜನ ಮಕ್ಕಳು ಒಂದು ಪತ್ರವನ್ನು ಮಾಡಿಕೊಂಡು ಅದರಲ್ಲಿ ಕಂಚುಮುತ್ತುಗಳನ್ನು ವಿಭಾಗ ಮಾಡಿಕೊಂಡಿದ್ದು, ಸದರಿ ಪತ್ರದಲ್ಲಿ ಆ ಪತ್ರವಾಗುವ 75 ವರ್ಷಗಳ ಹಿಂದೆಯೇ ವಿಭಾಗವಾಗಿದೆ ಎಂದು ಉಲ್ಲೇಖಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಯಾವುದೇ ವಿಭಾಗವಾಗಿಲ್ಲ ಎಂದು ನುಡಿದಿರುತ್ತಾರೆ. ನನಗೆ ಈಗ 30 ವರ್ಷ ವಯಸ್ಸಾಗಿರುತ್ತದೆ. 2 ನೇ ಪ್ರತಿವಾದಿ ಗೌರಮ್ಮರವರನ್ನು ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಅವರ ಕುಟುಂಬದ ವಂಶವೃಕ್ಷವೇ ಬೇರೆ ನಮ್ಮ ಕುಟುಂಬದ ವಂಶವೃಕ್ಷವೇ ಬೇರೆ ಎಂದರೆ ಸರಿ. 2 ನೇ ಪ್ರತಿವಾದಿ ದಾವಾ ಐಟಂ ನಂ.8 ರ ಸ್ವತ್ತನ್ನು ತಿಮ್ಮಪ್ಪರವರಿಂದ ಶುದ್ಧಕ್ರಯಕ್ಕೆ ಕೊಂಡುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.6 ರ ಸ್ವತ್ತು ಗೌರಮ್ಮರವರಿಗೆ ವಿಭಾಗದಲ್ಲಿ ಅವರ ತಂದೆಯಿಂದ ಬಂದಿರುತ್ತದೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯ ತಂದೆ

ಹನುಮಂತಪ್ಪನವರು ದಾವಾ ಐಟಂ ನಂ.6 ರ ಆಸ್ತಿಯನ್ನು ಲಕ್ಕಮ್ಮರವರಿಂದ ಕೊಂಡುಕೊಂಡಿದ್ದಾರೆ ಎಂದರೆ ಸರಿಯಲ್ಲ. ಹನುಮಂತಪ್ಪ ಮತ್ತು ತಿಮ್ಮಣ್ಣರವರಿಂದ ದಿನಾಂಕ 24/12/1979 ರಂದು ದಾವಾ ಐಟಂ ನಂ.8 ರ ಆಸ್ತಿಯನ್ನು 2 ನೇ ಪ್ರತಿವಾದಿ ಶುದ್ಧಕ್ರಯಕ್ಕೆ ಕೊಂಡುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.7 ರ ಆಸ್ತಿಯನ್ನು 2 ನೇ ಪ್ರತಿವಾದಿ ನನ್ನ ಮುತ್ತಾತನಾದ ಕೊಪ್ಪಲುರಂಗಪ್ಪರವರಿಂದ ಶುದ್ರಕ್ರಯಕ್ಕೆ ಕೊಂಡುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.9 ರ ಆಸ್ತಿಯನ್ನು 2 ನೇ ಪ್ರತಿವಾದಿ ನನ್ನ ಮುತ್ತಜ್ಜ ತಿಮ್ಮಪ್ಪರವರಿಂದ ಕೊಂಡುಕೊಂಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಕೊಪ್ಪಲು ರಂಗಪ್ಪರವರ ಮಕ್ಕಳಾದ ತಿಮ್ಮಪ್ಪ ಹನುಮಂತಪ್ಪ ಮತ್ತು ಗೋವಿಂದಪ್ಪರವರು ಮಾಡಿಕೊಂಡು ವಿಭಾಗದಲ್ಲಿ ಬಂದಂತಹ ಹಿಸ್ಸೆಗಳನ್ನು ಮೇಲೆ ಹೇಳಿದಂತೆ 2 ನೇ ಪ್ರತಿವಾದಿ ಕೊಂಡುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ವಿಭಾಗವಾಗಿಲ್ಲ ಎಂದು ನುಡಿದಿರುತ್ತಾರೆ. 1960 ರಲ್ಲೇ ಕೊಪ್ಪಲು ರಂಗಪ್ಪರವರ ಮಕ್ಕಳ ನಡುವೆ ವಿಭಾಗವಾಗಿದ್ದರೂ ಸಹ ಮಾಹಿತಿಯ ಕೊರತೆಯಿಂದ ನಾನು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಕೊಪ್ಪಲು ರಂಗಪ್ಪರವರ ಮಕ್ಕಳು ಅವರವರ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಸಾಲ ತೀರುವಳಿಗಾಗಿ 2 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಅಜ್ಜನಾದ

ಕರಿಯಪ್ಪನವರಿಗೆ ಯಾವುದೇ ಹಿಸ್ಸೆ ನೀಡಿಲ್ಲ ಎಂದು ನುಡಿದಿರುತ್ತಾರೆ. ನನ್ನ ತಂದೆ ಪರಮೇಶ್ವರಪ್ಪರವರು ವಿಭಾಗದಲ್ಲಿ ಹಿಸ್ಸೆ ಪಡೆದಿದ್ದು, ಅವರ ಅವಶ್ಯಕತೆಗಾಗಿ ಮಾರಾಟ ಮಾಡಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಈಗಾಗಲೇ ವಿಭಾಗ ಆಗಿರುವುದರಿಂದ ಅವುಗಳಲ್ಲಿ ನನಗೆ ಯಾವುದೇ ವಿಭಾಗದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಒ**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರದನ್ಯಾದಂ., ಕಡೂರು.**